

10


# ಮಿಮಿಯ 'ನಿಜವಾದ' ಕುಟುಂಬ ಯಾವುದು?






ಮಿಮಿ ಮನೆ ಹಾಗೂ ಶಾಲೆಯಲ್ಲಿ ತುಂಬಾ ಸಂತೋಷದ ದಿನಗಳನ್ನು ಕಳೆದಳು.

ಅವಳು ಒಂದು ದಿನ, ತಮ್ಮ ಮಕ್ಕಳನ್ನು ನೋಡಿಕೊಳ್ಳಲು ಸಾಧ್ಯವಾಗದೇ ಒಂದು ಮನೆಗೆ ತಮ್ಮ ಮಕ್ಕಳನ್ನು ಕಳುಹಿಸಿದ ಕುಟುಂಬದ ಕುರಿತಾದ ಒಂದು ದೂರದರ್ಶನದ ಕಾರ್ಯಕ್ರಮವನ್ನು ನೋಡಿದಳು. ಯಾಕೆ, ಯೋಚಿಸಿದಳು ಮಿಮಿ, ಆ ಮನೆ ಮಿಸೆಸ್ ಬೇರ್ ಮನೆಯಂತೆಯೇ ಕಾಣಿಸಿತು...ಹಾಗೂ ಆ ಮಕ್ಕಳು ತನ್ನಂತೆ ಹಾಗೂ ಟಿಂಗು ಮತ್ತು ಬೋಬೋ ಹಾಗೂ ಉಳಿದವರಂತೆ ಕಾಣಿಸಿದರು! ಆ ಕಾರ್ಯಕ್ರಮವನ್ನು ನೋಡಿದ ಬಹಳ ಹೊತ್ತಿನ ತನಕ ಅವಳು ಮೌನವಾಗಿದ್ದಳು.



ಕೊನೆಗೆ, ಅವಳು ತನ್ನ ಅಮ್ಮ ಮತ್ತು ಅಪ್ಪನನ್ನು ಕೇಳಿದಳು: "ನನ್ನ ತಂದೆ ಯಾಕೆ ನನ್ನನ್ನು ಇಟ್ಟುಕೊಂಡು ನನ್ನ ಆರೈಕೆ ಮಾಡಲು ಬಯಸಲಿಲ್ಲ? ಅವರಿಗೆ ನಾನು ಇಷ್ಟವಿರಲಿಲ್ಲವೇ ಅಥವಾ ನನ್ನನ್ನು ಪ್ರೀತಿಸುತ್ತಿರಲಿಲ್ಲವೇ?"ಎಂದು ಮಿಮಿ ತನ್ನ ತಂದೆ ತಾಯಿಯರನ್ನು ಕೇಳಿದಳು.



"ತಮ್ಮ ಮಕ್ಕಳನ್ನು ನೋಡಿಕೊಳ್ಳಲು ಹೆತ್ತವರಿಗೆ ಏಕೆ ಸಾಧ್ಯವಾಗುವುದಿಲ್ಲ ಎನ್ನುವುದಕ್ಕೆ ಹಲವು ಕಾರಣಗಳಿರುತ್ತವೆ", ಎಂದರು ಅಪ್ಪ."ತಮಗೆ ಸಾಧ್ಯವಾದರೆ ಅನೇಕ ಹೆತ್ತವರು ತಮ್ಮ ಮಕ್ಕಳನ್ನು ಬಳಿಯಲ್ಲಿರಿಸಿಕೊಂಡು ಅವರನ್ನು ನೋಡಿಕೊಳ್ಳುತ್ತಾರೆ.ಕೆಲವು ಹೆತ್ತವರು ತುಂಬಾ ಅನಾರೋಗ್ಯದಿಂದಿರುತ್ತಾರೆ ಅಥವಾ ತಮ್ಮ ಮಕ್ಕಳಿಗೆ ಆಹಾರ ಒದಗಿಸಲು ಅಥವಾ ಅವರನ್ನು ನೋಡಿಕೊಳ್ಳಲು ಅವರ ಬಳಿ ಹಣವಿರುವುದಿಲ್ಲ. ಹಾಗಾಗಿ ಅವರು ತಮ್ಮ ಮಕ್ಕಳನ್ನು ಮಿಸೆಸ್ ಬೇರ್ಳ ಮನೆಯಂತಹ ಜಾಗಗಳಿಗೆ ತಮ್ಮ ಮಕ್ಕಳನ್ನು ಕೊಡಬಹುದು.ತಮ್ಮ ತಂದೆ ತಾಯಿಗಳು ತಮ್ಮನ್ನು ನೋಡಿಕೊಳ್ಳಲು ಸಾಧ್ಯವಿಲ್ಲ ಎಂದಾದರೆ ಅದು ಮಕ್ಕಳ ತಪ್ಪಲ್ಲ...ಹಾಗೇ ನಿನ್ನ  ಅಪ್ಪ ನಿನ್ನನ್ನು ನೋಡಿಕೊಳ್ಳಲಿಲ್ಲ ಎಂದರೆ ಅದು ನಿನ್ನ ತಪ್ಪು ಅಲ್ಲವೇ ಅಲ್ಲ."


"ಹಾಗಾಗಿ, ಬಹುಷಃ ನಿನ್ನ ತಂದೆ ನಿನ್ನನ್ನು ಪ್ರೀತಿಸುತ್ತಿದ್ದಿರಬಹುದು ಹಾಗೂ ನಿನ್ನನ್ನು ತನ್ನ ಬಳಿ ಇರಿಸಿಕೊಳ್ಳಲು ಬಯಸುತ್ತಿದ್ದಿರಬಹುದು ಆದರೆ ನೀನು ಸುರಕ್ಷಿತತೆಯಿಂದ ಒಳ್ಳೆಯ ಆರೈಕೆಯಲ್ಲಿರಲಿ ಎಂದು ಹಾಗೆ ಮಾಡಿರಬಹುದು.ಅವರಿಗೆ ಸಹಾಯ ಮಾಡಲು ನಿನ್ನ ಮಮ್ಮಿ ಬಳಿಯಲ್ಲಿಲ್ಲದ ಕಾರಣ ಅವರಿಗೆ ನಿನ್ನನ್ನು ನೋಡಿಕೊಳ್ಳಲು ಅಸಾಧ್ಯವಾಗಿರಬಹುದು." ಎಂದಳು ಮಮ್ಮಿ. "ಆದರೆ ನಿನ್ನ ಜನ್ಮಕೊಟ್ಟ ತಂದೆ ಹಾಗೂ ತಾಯಿ ಇಷ್ಟಪಟ್ಟಂತೆಯೇ ನಿನ್ನನ್ನು ಪ್ರೀತಿಸಲು ಹಾಗೂ ಆರೈಕೆ ಮಾಡಲು ನಾವು ಈಗ ಇಲ್ಲಿದ್ದೇವಲ್ಲಾ."

"ಕೆಲವು ಸಲ ಹೆತ್ತವರು ತಮ್ಮ ಮಕ್ಕಳನ್ನು ಅತೀ ಚಿಕ್ಕ ಮಕ್ಕಳಿರುವಾಗಲೇ ಕೊಟ್ಟು ಬಿಡಬಹುದು, ಹಾಗೂ ಕೆಲವು ಸಲ ತಮ್ಮ ಮಕ್ಕಳು ಸ್ವಲ್ಪ ದೊಡ್ಡವರಾಗುವ ವರೆಗೆ ಕಾದು ನಂತರ ಕೊಡಬಹುದು ಏಕೆಂದರೆ ಅವರಿಗೆ ನಂತರದಲ್ಲಿ ಅವರನ್ನು ಸಾಕಲು ಅಸಾಧ್ಯವಾಗಬಹುದು ಎಂದು.  ಆದರೆ ಆ ಮನೆಯಲ್ಲಿತಮ್ಮ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಲಾಗುತ್ತಿದೆ, ಅವರಿಗೆ ಒಳ್ಳೆಯ ಆಹಾರ ಕೊಟ್ಟು ಆರೈಕೆ ಮಾಡಲಾಗುತ್ತದೆ ನಿನಗೆ ಸಿಗುವ ಹಾಗೆ... ಎಂಬುದೇ ಅವರ ಆಸೆಯಾಗಿರುತ್ತದೆ.ಮತ್ತು ಈ ಮನೆಗಳಲ್ಲಿನ ಕೆಲವು ಮಕ್ಕಳಿಗೆ ನಿನಗೆ ಸಿಕ್ಕಿದ ಹಾಗೆ ಒಂದು ಹೊಸ ಮನೆ ಹಾಗೂ ಪೋಷಕರು ಸಿಗುತ್ತಾರೆ", ಎಂದರು ಅಪ್ಪ.



"ಹಾಗಾದರೆ ನೀವು ನನ್ನ ನಿಜವಾದ ತಂದೆ ತಾಯಿಗಳಾ?ಅಥವಾ ಅವರು ನನ್ನ ನಿಜವಾದ ತಂದೆ ತಾಯಿಗಳಾ?" ಎಂದು ಮಿಮಿ ಕೇಳಿದಳು.

"ಅವರು ನಿನ್ನ ನಿಜವಾದ ಹೆತ್ತವರು ಏಕೆಂದರೆ ನಿನಗೆ ಅವರು ಜನ್ಮ ಕೊಟ್ಟಿದ್ದಾರೆ ಹಾಗೂ ಅವರು ನಿನ್ನ ಜೀವನದ ಕೆಲವು ಸಮಯ ನಿನ್ನನ್ನು ನೋಡಿಕೊಂಡಿದ್ದಾರೆ ಹಾಗೂ ಆ ಸಮಯಕ್ಕೆ ಅವರಿಂದ ಮಾಡಲು ಸಾಧ್ಯವಾದದ್ದನ್ನೆಲ್ಲಾ ಮಾಡಿದ್ದಾರೆ.ಆದರೆ ಅವರಿಂದ ಸಾಧ್ಯವಾಗದಿದ್ದಾಗ ಹಾಗೂ ಅವರು ಈಗ ಇಲ್ಲಿಲ್ಲದ ಕಾರಣ, ಮತ್ತು ನಾವು ನಿನ್ನನ್ನು ಪ್ರೀತಿಸಲು ಹಾಗೂ ನಿನ್ನ ಆರೈಕೆ ಮಾಡಲು ಇಲ್ಲಿರುವ ಕಾರಣ, ನಾವು ನಿನ್ನ ನಿಜವಾದ ತಂದೆ ತಾಯಿಗಳು."ಎಂದರು ಅಪ್ಪ.



"ಹಾಗಾದರೆ, ನೀವಿಬ್ಬರೂ ನನ್ನ ನಿಜವಾದ ತಂದೆ ತಾಯಿಗಳು?"ಆಶ್ಚರ್ಯದಿಂದ ಮಿಮಿ ಕೇಳಿದಳು.
"ಹೌದು," ಅಮ್ಮ ಹೇಳಿದಳು, "ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುವ ಹಾಗೂ ನಿನ್ನನ್ನು ಪ್ರೀತಿಸುವ ಯಾವುದೇ ತಂದೆ ತಾಯಿಯೂ ನಿಜವಾದ ತಂದೆ ತಾಯಿ."
"ಹಾಗಾದರೆ, ಈಗ ನಿಜವಾಗಿಯೂ ನೀವು ನನ್ನ ಕುಟುಂಬ?"ಎಂದು ಮಿಮಿ ಸಂಶಯದಿಂದ ಪ್ರಶ್ನಿಸಿದಳು.
"ಸರಿ.ನಾನು ಮತ್ತು ನಿನ್ನ ಅಮ್ಮ ಭೇಟಿಯಾಗಿ ಒಟ್ಟಿಗಿರಲು ನಿರ್ಧರಿಸಿದಾಗ ನಾವು ಒಂದು ಕುಟುಂಬವಾದೆವು." ಎಂದು ಅಮ್ಮ ವಿವರಿಸಿದಳು. ನಂತರ ನಾವು ನಿನ್ನನ್ನು ಭೇಟಿಯಾದೆವು ಹಾಗೂ ನೀನು ನಮ್ಮ ಮಗುವಾಗಬೇಕೆಂದು ಬಯಸಿದೆವು, ಹಾಗಾಗಿ ನೀನು ಈಗ ನಮ್ಮ ಕುಟುಂಬ ಮತ್ತು ನಾವೆಲ್ಲಾ ಈಗ ಒಂದು ಕುಟುಂಬವಾಗಿದ್ದೇವೆ!"



ಕುಟುಂಬಗಳು ಮಜವಾಗಿರುತ್ತವೆ, ಎಂದು ಆ ರಾತ್ರಿ ಮಲಗಲು ಹೋಗುವಾಗ ಮಿಮಿ ಯೋಚಿಸಿದಳು. ನೀವು ಒಬ್ಬರಲ್ಲಿ ಹುಟ್ಟಬಹುದು ಅಥವಾ ಒಬ್ಬರಿಂದ ದತ್ತು ಪಡೆಯಬಹುದು...ಎರಡೂ ತರದಲ್ಲಿ ನೀವು ಅವರಿಗೆ ಸೇರುತ್ತೀರಿ! ನೀವು ಅವರಿಗೆ ಸೇರಿದವರು ಏಕೆಂದರೆ ನೀವು ಅವರಿಗೆ ಬೇಕಾದವರು ಹಾಗೂ ಅವರು ನಿಮ್ಮನ್ನು ಪ್ರೀತಿಸುತ್ತಾರೆ....ಅದು ಬಹಳ ಮುಖ್ಯವಾಗುತ್ತದೆ.

"ನಾನು ಈ ಕುಟುಂಬಕ್ಕೆ ಸೇರಿದವಳು ಎಂದು ನನಗೆ ತುಂಬಾ ಹರ್ಷವಾಗುತ್ತಿದೆ...ನಾನು ನಿಮ್ಮಿಬ್ಬರನ್ನೂ ಪ್ರೀತಿಸುತ್ತೇನೆ."ಎಂದು ಮಿಮಿ ತನ್ನ ಅಮ್ಮ ಮತ್ತು ಅಪ್ಪ ತನಗೆ ಶುಭ ರಾತ್ರಿ ಹೇಳಲು ಬಂದಾಗ ಅವರಿಗೆ ಹೇಳಿದಳು.

"ನಿನ್ನನ್ನು ನಮ್ಮ ಕುಟುಂಬದ ಭಾಗವಾಗಿ ಪಡೆದದ್ದಕ್ಕೆ ನಾವೇ ಅದೃಷ್ಟವಂತರು," ಎಂದು ಅಮ್ಮ ಮತ್ತು ಅಪ್ಪ ಹೇಳಿದರು."ನಾವೂ ನಿನ್ನನ್ನು ತುಂಬಾ ತುಂಬಾ ಯಾವಾಗಲೂ ಪ್ರೀತಿಸುತ್ತೇವೆ ಮಿಮಿ!"

ಸಮುದಾಯ ಮಕ್ಕಳ ಮತ್ತು ಹದಿಹರೆಯದವರ ಮಾನಸಿಕ ಆರೋಗ್ಯ ಸೇವೆಗಳ
ಯೋಜನೆ,
ಮಕ್ಕಳ ಮತ್ತು ಹದಿಹರೆಯದವರ ಮನೋವೈದ್ಯಶಾಸ್ತ್ರ ಇಲಾಖೆ,
ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ರಾಷ್ಟ್ರೀಯ ಸಂಸ್ಥೆ (ನಿಮ್ಹಾನ್ಸ್)
(ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆ)
ಹೊಸೂರು ರಸ್ತೆ,  ಬೆಂಗಳೂರು-560029
**Website:www.nimhans.ac.in**
**Email :capnimhans@gmail.com**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದ ನೆರವಿನೊಂದಿಗೆ

ವಿನ್ಯಾಸ ಮತ್ತು ಕಲೆ: ಸತೀಶ್ ರಾಮ್